0303/0723

**III Semester 3 Years LL.B./VII Semester 5 Years B.A. LL.B./B.B.A. LL.B. Examination, December 2015**

**CRIMINAL LAW – II**

**(Cr.P.C., J.J. Act & P.O. Act)**

Duration : 3 Hours Max. Marks : 100

**Instructions** : 1. Answer Q.No. **9** and **any five** of the remaining questions.

2. Q.No. **9** carries **20** marks and the remaining questions carry **16** marks **each**.

3. Answers should be written either in **English** or **Kannada completely**.

Q. No. 1. Discuss the constitution and powers of criminal courts. Marks : 16

ಅಪರಾಧಿಕ ನ್ಯಾಯಾಲಯಗಳ ರಚನೆ ಮತ್ತು ಅಧಿಕಾರಗಳನ್ನು ಚರ್ಚಿಸಿ.

Q. No. 2. Discuss the procedure to be followed by Criminal Courts in compelling appearance of a person. Marks : 16

ಅಪರಾಧಿಕ ನ್ಯಾಯಾಲಯಗಳಲ್ಲಿ ಒಬ್ಬ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಚರ್ಚಿಸಿ.

Q. No. 3. Discuss the provisions of Cr.P.C. relating to security for keeping peace and good behaviour. Marks : 16

ಅಪರಾಧಿಕಾ ಪ್ರಕ್ರಿಯಾ ಸಂಹಿತೆಯಲ್ಲಿನ ಶಾಂತಿ ಮತ್ತು ಸುನಡತೆಯ ಭದ್ರತೆ ಕುರಿತಾದ ಉಪಬಂಧಗಳನ್ನು ಚರ್ಚಿಸಿ.

Q. No. 4. Explain the powers of Appellate Court and the procedure for hearing appeals. Marks : 16

ಮೇಲ್ಮನವಿ ನ್ಯಾಯಾಲಯದ ಅಧಿಕಾರಗಳನ್ನು ಮತ್ತು ಮೇಲ್ಮನವಿಯ ವಿಚಾರಣೆಯ ಪ್ರಕ್ರಿಯೆಯನ್ನು ವಿವರಿಸಿ.

P.T.O.

Q. No. 5. Discuss the formation and powers of Juvenile Justice Board and its efficacy. Marks : 16

ಬಾಲಾ ನ್ಯಾಯ ಮಂಡಳಿಯ ರಚನೆ ಮತ್ತು ಅಧಿಕಾರವನ್ನು ಮತ್ತು ಅದರ ಪ್ರಾಮುಖ್ಯತೆಯನ್ನು ಚರ್ಚಿಸಿ.

Q. No. 6. Explain the provisions regarding suspension, remission and commutation of sentence under criminal procedure code. Marks : 16

ಅಪರಾಧಿಕ ಪ್ರಕ್ರಿಯಾ ಸಂಹಿತೆಯಲ್ಲಿ ಶಿಕ್ಷೆಯನ್ನು ತಡೆಹಿಡಿಯುವಿಕೆ, ಕ್ಷಮಾಪಣೆ ಮತ್ತು ಬದಲಾವಣೆ ಮಾಡುವ ಕುರಿತು ಇರುವ ಉಪಬಂಧಗಳನ್ನು ವಿವರಿಸಿ.

Q. No. 7. What is Anticipatory bail ? When Anticipatory bail may be granted and when Anticipatory bail may not be granted in non-bailable offences ? Discuss. Marks : 16

ನಿರೀಕ್ಷಣಾ ಜಾಮೀನು ಎಂದರೇನು ? ಜಾಮೀನುರಹಿತ ಅಪರಾಧಗಳಲ್ಲಿ ಯಾವಾಗ ನಿರೀಕ್ಷಣಾ ಜಾಮೀನು ನೀಡಲಾಗುವುದು ಮತ್ತು ನೀಡಲಾಗುವುದಿಲ್ಲ? ಚರ್ಚಿಸಿ.

Q. No. 8. Write short note on **any two** of the following : Marks : 8+8=16

ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Joinder of charges

ಆರೋಪಗಳ ಸೇರ್ಪಡೆ

(b) Search warrant

ಶೋಧನೆಯ ಆದೇಶ

(c) Procedure in case of offenders fails to observe the conditions of bond.

ಮುಚ್ಚಳಿಕೆಯ ಷರತ್ತುಗಳನ್ನು ಪಾಲಿಸಲು ಅಪರಾಧಿಯು ವಿಫಲನಾದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ.

Q. No. 9. Solve **any two** of the following : Marks : 10×2=20

ಕೆಳಗಿನವುಗಳಲ್ಲಿ ಯಾವುದಾದರೂ **ಎರಡನ್ನು** ಪರಿಹರಿಸಿ :

(a) 'A' is carrying on the licenced trade of selling liquor , adjacent to Hubballi Bus Stand. A's servants openly soliciting public to consume liquor in a manner causing discomfort to the public. The noise caused by selling liquor caused discomfort to the people living in the locality and pedestrians. Executive magistrate on receiving the information posses an order under S. 133 of Cr.Pc. restraining 'A' from selling the liquor. 'A' challenges order. Advice.

'A' ಯು ಅಧಿಕೃತ ಮದ್ಯ ಮಾರಾಟಗಾರನು ಹುಬ್ಬಳ್ಳಿ ವಾಹನ ನಿಲ್ದಾಣದ ಹತ್ತಿರ ಮದ್ಯ ಮಾರಾಟ ಮಾಡುತ್ತಿರುತ್ತಾನೆ. ಆತನ ಸೇವಕರು ಬಹಿರಂಗವಾಗಿ ಸಾರ್ವಜನಿಕರನ್ನು ಮದ್ಯ ಖರೀದಿಸಲು ಪುಸಲಾಯಿಸಿ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡಿರುತ್ತಾರೆ. ಬಹಿರಂಗ ಮದ್ಯ ಮಾರಾಟದಿಂದ ಉಂಟಾದ ಗದ್ದಲದಿಂದ ಸುತ್ತಮುತ್ತ ಜೀವಿಸುವವರಿಗೂ ಹಾಗೂ ಪಾದಾಚಾರಿಗಳಿಗೂ ತೊಂದರೆಯಾಗುತ್ತಿರುತ್ತದೆ. ಈ ಘಟನೆಗಳ ಮಾಹಿತಿ ಪಡೆದ ಸ್ಥಳೀಯ ಕಾರ್ಯಾಂಗ ದಂಡಾಧಿಕಾರಿ 'ದಂಡ ಪ್ರಕ್ರಿಯಾ ಸಂಹಿತೆಯ' ಕಲಂ 133ರ ಪ್ರಕಾರ 'A'ಯು ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿರುತ್ತಾರೆ. 'A' ನು ಈ ಆದೇಶವನ್ನು ಪ್ರಶ್ನಿಸುತ್ತಾನೆ. ಸಲಹೆ ನೀಡಿ.

(b) 'A' is an high ranking Police Officer outraged the modesty of an I.A.S. Lady Officer 'L'. A complaint was filed against 'A' under Sections 341, 342, 353, 354 and 509 of I.P.C. The police investigated the matter and submitted a report under Section 173 of Cr.Pc. recommending discharge of the accused. Consequently magistrate discharged an accused without hearing the complainant and without quoting any reasons. 'L' woman I.A.S. officer wants to challenge the order. Advice.

'A' ಎಂಬ ಉನ್ನತ ಪೋಲೀಸ್ ಅಧಿಕಾರಿಯು 'L' ಎಂಬ ಮಹಿಳಾ IAS ಅಧಿಕಾರಿಯ ಮರ್ಯಾದೆಗೆ ಕುಂದು ಉಂಟು ಮಾಡುವ ಅಪರಾಧವನ್ನು ಮಾಡಿರುತ್ತಾನೆ. ಅಪರಾಧಿಯ ವಿರುದ್ಧ ಭಾರತ ದಂಡ ಸಂಹಿತೆಯ 341, 342, 353, 354 ಮತ್ತು 509 ರ ಕಲಂ ಅಡಿಯಲ್ಲಿ ದೂರು ದಾಖಲಾಗಿರುತ್ತದೆ. ಈ ಪ್ರಕರಣವನ್ನು ಪೋಲೀಸರು ತನಿಖೆ ಮಾಡಿ ಆರೋಪಿಯನ್ನು ಬಿಡುಗಡೆ ಮಾಡಬಹುದೆಂದು ಕಲಂ 173 Cr.Pc. ಪ್ರಕಾರ ವರದಿಯನ್ನು ಸಲ್ಲಿಸುತ್ತಾರೆ. ಪರಿಣಾಮವಾಗಿ ಸದರಿ ನ್ಯಾಯಾಲಯ ಯಾವುದೇ ಕಾರಣವನ್ನು ನೀಡದೆ ಮತ್ತು ದೂರುದಾರರನ್ನು ಕರೆಸದೆ ಆರೋಪಿಯನ್ನು ಬಿಡುಗಡೆ ಮಾಡುತ್ತಾರೆ. 'L' ಎಂಬ ಮಹಿಳಾ ಅಧಿಕಾರಿಯು ಆದೇಶವನ್ನು ಪ್ರಶ್ನಿಸಲು ಬಯಸುತ್ತಾಳೆ. ಸಲಹೆ ನೀಡಿ.

(c) A and B are jointly committed dacoity at Maharashtra and Karnataka in a span of one year. They were arrested in Mumbai. Can they be tried jointly for the both offences in the Mumbai Court ? Decide.

'A' ಮತ್ತು 'B' ಎಂಬುವವರು ಜಂಟಿಯಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಒಂದು ವರ್ಷದ ಅವಧಿಯಲ್ಲಿ ಡಕಾಯಿತಿಗಳನ್ನು ಮಾಡಿರುತ್ತಾರೆ. ಅವರುಗಳನ್ನು ಮುಂಬಯಿಯಲ್ಲಿ ದಸ್ತಗಿರಿ ಮಾಡಲಾಗುತ್ತದೆ. ಇವರ ಎರಡೂ ಅಪರಾಧಗಳಿಗೆ ಸಂಬಂಧಿಸಿದಂತೆ ಮುಂಬಯಿ ನ್ಯಾಯಾಲಯದಲ್ಲಿ ಜಂಟಿಯಾಗಿ ವಿಚಾರಣೆ ನಡೆಸಬಹುದೇ ? ತೀರ್ಮಾನಿಸಿ.